ಮಾಡಿದ್ದಾರೆಂಬುದನ್ನು ನೋಡಿದ್ದೀರಾ? ಆ ಪೊಟ್ಟಣಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಬೇಕೆಂದು ಇಲಾಖೆಯ ಉಪ ವಿಭಾಗದ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಸಿರಿಕಲ್ಚರ್‌ರವರು ಆದೇಶವನ್ನು ಕೊಟ್ಟಿದ್ದರೂ ಕೂಡ ಆ ರೀತಿ ಆ ಪೊಟ್ಟಣಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡದೆ ಪೊಟ್ಟಣಗಳು ಚಾಕಿಯಾಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ ೭೨,೪೯೮ ರೂ.ಗಳ ಮೊಟ್ಟೆಯನ್ನು ಬಿಟ್ಟಿದ್ದಾರೆ. ಅದರ ಬಗ್ಗೆ ಗಮನಿಸಬೇಕು. ಅವರ ಮೇಲಾಧಿಕಾರಿಗಳು ಕೊಟ್ಟಂತಹ ಆದೇಶವನ್ನೂ ಉಲ್ಲಂಘಿಸಿದ್ದಾರೆ. ಸುಮ್ಮನೆ ಇದನ್ನು ಹೇಳುತ್ತಾರೆ. ಇದರಲ್ಲಿ ಅವರು ದುರುಪಯೋಗ ಮಾಡಿದ್ದಾರೆ. ಸುಳ್ಳು ರಸೀದಿಯನ್ನು ಸೃಷ್ಟಿಮಾಡಿದ್ದಾರೆ. ಆ ವಿಚಾರ ಮಂತ್ರಿಗಳಿಗೂ ಗೊತ್ತಿದ್ದರೂ ಮುಚ್ಚುತ್ತಿದ್ದಾರೆ. ಆವನನ್ನು ಜಪಾನಿಗೆ ಕಳಿಸಬೇಕೆಂಬ ಉದ್ದೇಶದಿಂದ ಲೆಕ್ಕ ತಪಾಸಣೆಯನ್ನು ೫ ವರ್ಷಗಳಿಂದಲೂ ಮುಂದೂಡಿಸಿದ್ದಾರೆ. ಇದು ಎಂತಹ ಅನ್ಯಾಯ ?

ಶ್ರೀ ವೈ. ಕೆ. ರಾಮಯ್ಯ.—ಇಲ್ಲಿ ಯಾವುದೇ ವಿಚಾರವನ್ನು ಮುಚ್ಚಿಕೊಳ್ಳತಕ್ಕಂತಹದ್ದಕ್ಕೆ ಅವಕಾಶವೇ ಇಲ್ಲ. ಮಾನ್ಯ ಸದಸ್ಯರು ಕೇಳಿರತಕ್ಕಂತಹದ್ದಕ್ಕಿಂತ ಹೆಚ್ಚಿಗೆ ಏವರಗಳನ್ನು ಕೊಟ್ಟಿದ್ದೇನೆ. ಇದಕ್ಕೆ ಕಾರಣವೇನೆಂದರೆ, ಆಡಳಿತದ ವ್ಯವಸ್ಥೆಯಲ್ಲಿ ಏನಾದರು ಕೆಟ್ಟಿದ್ದು ಇದ್ದರೆ, ಅದನ್ನು ಹೊರಗೆ ಹಾಕಿ ಅದನ್ನು ಸಾರ್ವಜನಿಕರ ಗಮನಕ್ಕೆ ತಂದು ಕೆಟ್ಟದ್ದು ಮಾಡಿರುವವರಿಗೆ ಏನಾದರೂ ಬುದ್ಧಿ ಕಲಿಸಬೇಕೆಂಬುದರಲ್ಲಿ ನಾನು ಮೊದಲಿಗ. ಮುಚ್ಚಿಡತಕ್ಕಂತಹದ್ದು ಏನೂ ಇಲ್ಲ. ನಾನು ಕೂಡ ಅದಕ್ಕೆ ತಯಾರಿಲ್ಲ ತಯಾರು ಮಾಡಿದ ಚಾಕಿಯನ್ನು ಮಾರುವುದಕ್ಕಾಗಲಿಲ್ಲ ಅಂತ ಹೇಳಿದ್ದಾರೆ. ಆದರಲ್ಲಿ ಆದಂತಹ ನಷ್ಟಕ್ಕೆ ಇಲಾಖೆಯ ಮೇಲಾಧಿಕಾರಿಗಳು ಸರ್ಟಿಫಿಕೇಟನ್ನು ಕೊಡಬೇಕು. ಆದರೆ ಇದರಲ್ಲಿ ಆ ರೀತಿ ಸರ್ಟಿಫಿಕೇಟ್ ಮಾಡಿಲ್ಲ. ಸರ್ಕಾರಕ್ಕೆ ನಷ್ಟವಾಗಿದೆ. ಆದರ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ. ಆದರೆ ಆ ಅಧಿಕಾರಿಯನ್ನು ಜಪಾನಿಗೆ ಕಳಿಸುತ್ತಾರೋ ಇಂಗ್ಲೆಂಡಿಗೆ ಕಳಿಸಿಕೊಡುತ್ತಾರೋ ಆ ಪ್ರಶ್ನೆಯೆ ನನ್ನ ಮುಂದೆ ಇಲ್ಲ. ಹಿಂದೆ ಏನಾಯಿತು ಅದು ನನಗೆ ಗೊತ್ತಿಲ್ಲ ಆದರೆ ನಾನು ಇಷ್ಟನ್ನು ಮಾತ್ರ ಭರವಸೆ ಕೊಡುತ್ತೇನೆ. ಯಾವುದೇ ವಿಷಯದಲ್ಲಿ ಮುಚ್ಚಿಡ್ಜ ಮರೆ ಮಾಡುವ ಅವಶ್ಯಕತೆ ಇಲ್ಲ. ಯಾರನ್ನೂ ರಕ್ಷಣೆ ಮಾಡತಕ್ಕಂತಹ ಅವಶ್ಯಕತೆಯೂ ನನಗೆ ಇಲ್ಲ.

ಶ್ರೀ ಜಿ. ರಾಜು ಗೌಡ.—ಪ್ರಶ್ನೆಯ ಮೂಲ ಉದ್ದೇಶವನ್ನು ಹೇಳದೆ ಏನೇನೂ ಮಾತನಾಡುತ್ತಾರೆ. ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಚಾರಣೆಯನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ? ತಪ್ಪಿಸ್ಥರಿಂದ ಎಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೋ ಆ ಹಣವನ್ನು ೧೮ ಪರ್ಸೆಂಟ್ ಬಡ್ಡಿ ಸಮೇತ ವಸೂಲು ಮಾಡುತ್ತೀರೋ? ಅವರ ಚಿರಾಸ್ತಿಯನ್ನು ಅಟಾಚ್ ಮಾಡುತ್ತೀರೋ ಕೋರ್ಟಿನಲ್ಲಿ ಮಾಡುವ ಹಾಗೆ.

ಶ್ರೀ ವೈ. ಕೆ. ರಾಮಯ್ಯ.—ನಾನು ಈಗಾಗಲೇ ಇದರ ಬಗ್ಗೆ ಉತ್ತರ ಹೇಳಿದ್ದೇನೆ. ಇಬ್ಬರು ಅಧಿಕಾರಿಗಳನ್ನು ಈಗಾಗಲೇ ಅಮಾನತ್ತಿನಲ್ಲಿಡಲಾಗಿದೆ ತಪ್ಪು ಮಾಡಿದಂತಹ ಸರ್ಕಾರಿ ಅಧಿಕಾರಿಗಳಿಗೆ ಏನೇನು ಶಿಕ್ಷೆ ಕೊಡಬೇಕು ? ಏನೇನು ಕ್ರಮ ತೆಗೆದುಕೊಳ್ಳಬೇಕೆಂಬುದರಲ್ಲಿ ನಿಯಮಾವಳಿಗಳು ಇವೆ. ಹಣವನ್ನು ವಸೂಲಿ ಮಾಡುವುದಕ್ಕೂ ಕೂಡ ನಿಯಮಾವಳಿಗಳೂ ಇವೆ. ಬಡ್ಡಿಯನ್ನು ವಸೂಲಿ ಮಾಡಬೇಕೋ, ಚಕ್ರ ಬಡ್ಡಿಯನ್ನು ಸೇರಿಸಿ ವಸೂಲಿ ಮಾಡಬೇಕೋ ಎಂಬುದರ ಬಗ್ಗೆಯೂ ನಿಯಮಾವಳಿಗಳು ಇವೆ. ರಿವರ್ಟ್ ಮಾಡುವುದಕ್ಕೆ ಮತ್ತೆ ಅವರನ್ನು ಡಿಸ್‌ಮಿಸ್ ಮಾಡುವುದಕ್ಕೆ ಕಾನೂನು ಇದೆ. ಮಾಡಿರುವ ಅಪರಾಧ ಅವರು ನಡೆದುಕೊಂಡಿರುವ ನಡವಳಿಕೆಗಳ ಆಧಾರದ ಮೇಲೆ ಅದನ್ನು ಗಮನದಲ್ಲಿಟ್ಟುಕೊಂಡು ಕಾನೂನಿನ ಚೌಕಟ್ಟಿನಲ್ಲಿ ಯಾವ ಕ್ರಮವನ್ನು ಆ ಅಧಿಕಾರಿಯ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ನೋಡುತ್ತೇನೆ. ಇದರಿಂದ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತಿದ್ದೇನೆ.

ಸಿಂಧನೂರು ಪಟ್ಟಣದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.

೪೩೦. ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿಂಧನೂರು ನಗರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಶಾಸನ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಬಂದಿದೆ.

ಆ) ೧೧.೧೦ ಲಕ್ಷ ರೂ.ಗಳ ಅಂದಾಜು ವೆಚ್ಚದ ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿದೆ. ಅಭಾವ ಕಾವಲುಗಾರಿಗಳಲ್ಲಿ ಕೊಳವೆ ಬಾವಿಗಳನ್ನು ಕೂಡ ತೋಡಿ, ಕೈ ಪಂಪುಗಳನ್ನು ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

ಶ್ರೀ ಆರ್. ನಾರಾಯಣಪ್ಪ.—೧೧.೧೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ನೀರು ಸರಬರಾಜು ಅಭಿವೃದ್ಧಿ ಯೋಜನೆ ಮಂಜೂರಾತಿಯನ್ನು ನೀಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದು ಓವರ್ ಹೆಡ್ ಟ್ಯಾಂಕ್‌ಗೆ ಸಂಬಂಧಪಟ್ಟದ್ದು. ಆದರೆ ಇದರ ಮೂಲ ಯೋಜನೆಯ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಹಲವಾರು ಯೋಜನೆಗಳಲ್ಲಿ ನಗರಗಳಿಗೆ ನೀರನ್ನು ಒದಗಿಸತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳತಕ್ಕ ವಿಚಾರವನ್ನೂ ಕೂಡ ಪರಿಶೀಲನೆ ಮಾಡತಕ್ಕ ಯೋಚನೆಯಲ್ಲಿಟ್ಟುಕೊಂಡಿದ್ದೆವೇ ಎನ್ನುವ ವಿಷಯವನ್ನು ಅವರಿಗೆ ಹೇಳುತ್ತೇನೆ.

ಶ್ರೀ ಆರ್. ನಾರಾಯಣಪ್ಪ.—೧೯೮೨-೮೩ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ತುಂಗಭದ್ರಾ ಕಾಲುವೆಯ ೪೦ನೇ ಉಪ ಕಾಲುವೆಯ ಮೂಲಕ ಸಿಂಧನೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂಬ ಯೋಜನೆಯನ್ನು ಕೈಬಿಡಲಾಗಿದೆ ಎಂಬುದಾಗಿ ಕೇಳಿದ್ದೇನೆ. ಅದರ ಬದಲು ತುಂಗ ಭದ್ರಾ ನದಿಯಿಂದಲೇ ನೀರನ್ನು ತರತಕ್ಕಂತಹ ಯೋಜನೆಯನ್ನು ತಯಾರು ಮಾಡಿದ್ದಾರೆಂದು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಸೂಕ್ತ ವಿವರಣೆಯನ್ನು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದೀ ವರ್ಷದಲ್ಲಿ ನೀರು ಸಿಕ್ಕುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ತುಂಗಾ ಭದ್ರಾ ಕಾಲುವೆಯ ೪೦ನೇ ಉಪ ಕಾಲುವೆಯ ಮೂಲಕ ನೀರನ್ನು ತೆಗೆದುಕೊಳ್ಳತಕ್ಕಂತಹ ಯೋಜನೆಯನ್ನು ಕೈಬಿಡಲಾಗಿದೆ.

ನಗರ ಸಭೆಯ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ಸೌಲಭ್ಯಗಳು.

೬೭ ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಗ್ರಾಮಾಣ ಕ್ಷೇತ್ರದಲ್ಲಿ ಲಭ್ಯವಿದ್ದ ಸೌಕರ್ಯಗಳು ಮಹಾನಗರ ಪಾಲಿಕೆಯ ಪರಿಮಿತಿಯೊಳಗೆ ಬಂದ ಹಳ್ಳಿಗಳಿಗೆ ವಿಸ್ತರಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಪ್ರಸ್ತಾಪವೇನಾದರೂ ಇದ್ದರೆ, ಮಹಾನಗರ ಸಭೆಯ ಸರಹದ್ದಿನಲ್ಲಿ ಬರುವ ಪುಟ್ಟಹಳ್ಳಿ (ಹ್ಯಾಮ್‌ಲೆಟ್ಸ್)ಗಳನ್ನು ಮಹಾನಗರ ಸಭೆಯ ವ್ಯಾಪ್ತಿಯಿಂದ ಹೊರಗುಳಿದ ಪಂಚಾಯತ್ ಮಂಡಲಿಯೊಳಗೆ ಕೂಡಿಸಲು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲಾಗುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಬಂದಿದೆ.

ಆ) ಸರಕಾರದ ಮುಂದೆ ಈಗ ಇಂಥ ಪ್ರಸ್ತಾವನೆ ಇಲ್ಲ.